
## ಕಳೆದ ಸಂಚಿಕೆಯಲ್ಲಿ



‘ನಾಗ್ಪಾಡ್ ನೋಡಿದ್ದೀಯ?’ ಎನ್ನುವ ಡಾಕ್ಟರ್ ಮನೋರಂಜನಿಯವರ ಮಾತು ಆಸ್ಕರ್ ವೈಲ್ಡ್‌ಗೆ ಅವನ ಜೀವನದ ಮಿತಿಯನ್ನು ತೋರಿಸುವಂತಿದ್ದವು. ಡಾ. ಮನೋರಂಜನಿ ತನ್ನ ಹಿನ್ನೆಲೆಯನ್ನು ಕುರಿತು ಹೇಳಿಕೊಂಡಳು. ಆಕೆಯ ತಾಯಿ ವೇಶ್ಯೆ ಆಗಿದ್ದುದು, ಅಮ್ಮನ ಆಸೆಯಂತೆ ತಾನು ಡಾಕ್ಟರ್ ಆದುದು, ಡಾಕ್ಟರ್ ಆದರೂ ಅಮ್ಮನನ್ನು ಅವಳ ಜಗತ್ತಿನಿಂದ ಹೊರಗೆ ತರಲು ಸಾಧ್ಯವಾಗದೆ ಹೋದುದು – ಎಲ್ಲವನ್ನೂ ಡಾಕ್ಟರ್ ಹೇಳಿಕೊಂಡರು. ತನ್ನ ಸೇವೆಯಲ್ಲಿ ಬಡವರಿಗೆ ಆದ್ಯತೆ ಎನ್ನುವುದನ್ನೂ ಹೇಳಿಕೊಂಡರು. ಮನೋರಂಜನಿ ಅವರ ಮಾತುಗಳು ಗುನ್ನಾಲಾಲ್ ಮತ್ತು ಆಸ್ಕರ್ ವೈಲ್ಡ್ ಮೇಲೆ ಪರಿಣಾಮ ಬೀರಿದವು. ಶ್ರೀಮಂತಿಕೆ ಬಂದ ಮೇಲೆ ತಾನು ಬೆಳೆದು ಬಂದ ಪರಿಸರವನ್ನೇ ಮರೆತದ್ದು ಗುನ್ನಾಲಾಲ್‌ಗೆ ನೆನಪಾಯಿತು. ಆತ, ತನ್ನ ಪೂರ್ವಾಶ್ರಮದ ಪರಿಚಯಗಳನ್ನು ನೇವರಿಸಲು ಪ್ರಯತ್ನಿಸಿದ, ಮೊಮ್ಮಗನ ಪರಿಸ್ಥಿತಿಯೂ ಭಿನ್ನವಾಗಿರಲಿಲ್ಲ. ಇಬ್ಬರೂ ತಮ್ಮದೇ ಗತದಲ್ಲಿ ಸಿಲುಕಿ ಪರಿತಪಿಸತೊಡಗಿದರು.

ಹತ್ತಿಸಿಕೊಂಡು ಹೋಗುವುದರಲ್ಲಿ ಲಗುಬಗೆಯಿಂದ ನಿರತರಾಗಿರುವ ಟ್ಯಾಕ್ಸಿವಾಲಗಳು. ಕಂಠಪೂರ್ತಿ ಕುಡಿದು ರಸ್ತೆಗಳಲ್ಲಿ ಓಲಾಡುತ್ತಿರುವ ಕುಡುಕರು. ಮಹಡಿಗಳ ಅಂಗಳದಲ್ಲಿ ಸೆರಗು ಜಾರಿಸಿಕೊಂಡು ಚಪ್ಪಾಳೆ ತಟ್ಟುತ್ತಾ ಗಿರಾಕಿಗಳನ್ನು ಆಕರ್ಷಿಸುತ್ತಿರುವ, ಕರೆಯುತ್ತಿರುವ ವೇಶ್ಯೆಯರು. ರಸ್ತೆಯಲ್ಲೇ ಗಿರಾಕಿಗಳೊಂದಿಗೆ ವ್ಯವಹರಿಸುತ್ತಿರುವ ವೇಶ್ಯೆಯರು ಮತ್ತು ದಲ್ಲಾಳಿಗಳು. ಚೌಕಾಶಿಯಲ್ಲಿ ಮುಳುಗಿ ಏರುಧ್ವನಿಯಲ್ಲಿ ಮಾತಿಗಿಳಿರುವ ಗಿರಾಕಿಗಳು ಮತ್ತು ದಲ್ಲಾಳಿಗಳು. ಸಿಕ್ಕ ಸಿಕ್ಕವರನ್ನು ತಡೆದು ಭವಿಷ್ಯ ಹೇಳಲು ಕಷ್ಟಪಡುತ್ತಿರುವ ಜೋಗತಿಯರು. ಫ್ಲಾಸ್ಕುಗಳಲ್ಲಿ ಚಹ ಮಾರುವ ಹುಡುಗರು. ಈ ಯಾವ ವಿದ್ಯಮಾನಗಳ ಪರಿವೆಯೇ ಇಲ್ಲದೆ ತಮ್ಮದೇ ಆದ ಆಟಗಳಲ್ಲಿ ಮುಳುಗಿದ ಚಿಕ್ಕ ಚಿಕ್ಕ ಮಕ್ಕಳು.

‘ಏನಂದೆ ರಾಜಕುಮಾರ? ಇಲ್ಲಿ ನಾವು ಹೇಗೆ, ಏಕೆ ಬದುಕುತ್ತಿರುವೆವೆಂದು ಕೇಳಿದೆಯಾ? ಇಗೋ ಈ ಹೊಟ್ಟೆ ತುಂಬಿಸಿಕೊಳ್ಳಲು. ಜಗತ್ತಿನಲ್ಲಿ ಬಡವರಿಗೆ ಹಸಿವಿಗಿಂತಲೂ ದೊಡ್ಡ ಶತ್ರು ಯಾರೂ ಇರಲಾರರು. ಹಸಿವಿನ ಮುಂದೆ ಗೌರವ, ಘನತೆ, ಮಾನ, ಮರ್ಯಾದೆ ಎಲ್ಲವೂ ನಗಣ್ಯ. ಆ ಎಲ್ಲವುಗಳನ್ನೂ ಬಿಟ್ಟು ನಾವಿಲ್ಲಿ ಬದುಕುತ್ತಿದ್ದೇವೆ. ನಾವು ಯಾರನ್ನೂ ಮೋಸದಿಂದ ಮಾತ್ರ ಕೊಳ್ಳೆ ಹೊಡೆಯುತ್ತಿಲ್ಲ...’

‘ನಮಗೆ ದುಡಿದು ತಿನ್ನಲು ಒಂದು ತುಂಡು ಭೂಮಿಯೂ ಇರಲಿಲ್ಲ. ನಾನೇ ಮನೆಗೆ ದೊಡ್ಡವಳು. ಅಪ್ಪ ಕುಡುಕ, ಐದು ಮಕ್ಕಳನ್ನು ಹುಟ್ಟಿಸಿ ಲಿವರ್ ಹಾಳಾಗಿ ಸತ್ತು ಹೋದ. ಕರುಳು ಹಂಚಿಕೊಂಡು ಹುಟ್ಟಿದವರ ಕರುಳಿಗೆ ಅನ್ನ ತುಂಬಿಸಲು ನಾನಿಲ್ಲಿ ಬಂದು ಬಿದ್ದೆ. ಕರುಳು ದೊಡ್ಡದು ಭಯ್ಯಾ...’

‘ನನಗಂತೂ ಇಲ್ಲಿಗೆ ಬರಲು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಏನು ಮಾಡುವುದು, ನನ್ನ ಗಂಡನಿಗೆ ಕ್ಯಾನ್ಸರ್ ಅಂಟಿಕೊಂಡುಬಿಡ್ತು. ಬಡವರು ನಾವು. ನಾನೊಬ್ಬಳೇ ಕೂಲಿ ಮಾಡಿ ಬರುವ ಆದಾಯದಲ್ಲಿ ಗಂಡನಿಗೆ ಸೇವೆ ಮಾಡಲೊ, ಮಗುವನ್ನು ಸಾಕಲೊ. ಯಾರೋ ಇಲ್ಲಿನ ಅಡ್ರಸ್ಸು ಕೊಟ್ಟರು, ಬಂದೆ. ದಿನಕ್ಕೆ ಸಾವಿರ ರೂಪಾಯಿಗಳಿಗೇನೂ ಮೋಸ ಇಲ್ಲ. ಆರು ತಿಂಗಳ ಹಿಂದೆ ಗಂಡ ಸತ್ತು ಹೋದ. ಮಗಳು ಪ್ರೈಮರಿ ಸ್ಕೂಲ್ ಓದುತ್ತಿದ್ದಾಳೆ. ಮೈ ನೋಯಿಸಿಕೊಂಡರೂ ಇಲ್ಲಿಗೆ ಚೆನ್ನಾಗಿ ಅಡ್ಜೆಸ್ಟ್ ಆಗಿಬಿಟ್ಟಿರುವೆ. ಮಗಳ ಹೆಸರಲ್ಲಿ ಒಂದು ಲಕ್ಷ ರೂಪಾಯಿ ಡಿಪಾಸಿಟ್ ಮಾಡಿದ್ದೇನೆ...’

‘ನಾವು ಊರಿನಿಂದ ಕೆಲಸ ಹುಡುಕುತ್ತಾ ಮುಂಬಯಿಗೆ ಬಂದು ಧಾರಾವಿಯಲ್ಲಿ ಬದುಕು ನಡೆಸ್ತಿದ್ವಿ. ಗಂಡ ನಾನೂ ಇಬ್ಬರೂ ಗಾರೆ ಕೆಲಸ ಮಾಡ್ತಿದ್ವಿ. ಇಬ್ಬರು ಮಕ್ಕಳು. ಗಂಡನಿಗೆ ಉಬ್ಬಸ ರೋಗ ಇತ್ತು. ಒಂದು ಮಳೆಗಾಲದಲ್ಲಿ ಗಂಡ ಇದ್ದಕ್ಕಿದ್ದಂತೆ ಉಸಿರು ನಿಲ್ಲಿಸಿದ. ಗಂಡ ಸತ್ತ ಮೇಲೆ ಡ್ರೈವರ್ ಒಬ್ಬನ ಪರಿಚಯವಾಯಿತು. ಅವನು ಆರು ತಿಂಗಳು ನನ್ನಿಂದ ಸುಖ ಪಡೆದನಲ್ಲದೆ ಕೂಡಿಟ್ಟಿದ್ದ ಮೂವತ್ತು ಸಾವಿರ ರೂಪಾಯಿಗಳನ್ನೂ ಕಿತ್ತುಕೊಂಡು ನಾಪತ್ತೆಯಾದ. ಮಕ್ಕಳನ್ನು ಸಾಕಲು ಬೇರೆ ದಾರಿ ಕಾಣದೆ ಇಲ್ಲಿ ಬಂದು ಬಿದ್ದೆ...’

‘ನನ್ನದು ಡಿಫರೆಂಟ್ ಸ್ಟೋರಿ. ನಾನು ಸಿನಿಮಾ ನಟಿಯಾಗಲು ಮುಂಬಯಿಗೆ ಬಂದವಳು. ಆದರೆ ನಾಯಕಿಯಾಗದೆ ಸಹ ನಟಿಯಾದೆ. ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ, ಕೈಗೆ ಐನೂರು ಕೊಡುತ್ತಿದ್ದರು. ಮತ್ತೆ ಡೈರೆಕ್ಟರ್‌ನಿಂದ ಹಿಡಿದು ಮೇಕಪ್‌ಮನ್‌ವರೆಗೆ ಎಲ್ಲರೊಂದಿಗೂ ಪುಗಸಟ್ಟೆ ಮಲಗಬೇಕಿತ್ತು. ಯಾರೋ ಇಲ್ಲಿಗೆ ಶಿಫ್ಟಾಗಲು ಹೇಳಿದರು. ವಯಸ್ಸು, ಚೆಲುವು ಎರಡೂ ಇದ್ದಿದ್ದರಿಂದ ದಿನಕ್ಕೆ ಕನಿಷ್ಠ ಮೂರು ಸಾವಿರವಾದರೂ ದುಡಿಯುತ್ತೇನೆ. ಈಗಲೂ ಕೆಲವು ಗಿರಾಕಿಗಳು ನನ್ನನ್ನು ಐಶ್ವರ್ಯ ರೈ ಎಂದೇ ಕರೆಯುತ್ತಾರೆ. ನನ್ನೊಡನೆ ಮಲಗಿ ಎದ್ದ ನಂತರ ಮಾತನಾಡಿದ್ದಕ್ಕಿಂತಲೂ ನೂರಿನ್ನೂರು ಕಡಿಮೆ ಕೊಟ್ಟು ಸದ್ದಿಲ್ಲದೆ ನಡೆದುಬಿಡುತ್ತಾರೆ. ನನ್ನ ಕಣ್ಣು ನೋಡು ರಾಜಕುಮಾರ, ಐಶ್ವರ್ಯ ರೈ ಥರಾನೇ ಕಾಣುತ್ತಿಲ್ಲವೆ? ನೀನು ಹೂಂ ಅಂದ್ರೆ ಈ ಕಸುಬನ್ನು ಕಂಪ್ಲೀಟಾಗಿ ತೊರೆದು ನಿನ್ನೊಂದಿಗೆ ಖುಷಿಯಿಂದ ಹಾರಿ ಬರ್ತೀನಿ...’

‘ನನ್ನದು ಔರಂಗಾಬಾದ್. ಕೋಟೆಯ ಮುಂದೆ ಅಮ್ಮ ಮಾಡಿಕೊಟ್ಟ ಮಿಠಾಯಿ ಬಿಲ್ಲೆಗಳನ್ನು ಮಾರುತ್ತಿದ್ದೆ. ಹೆಚ್ಚೆಂದರೆ ದಿನಕ್ಕೆ ನೂರೈವತ್ತರಿಂದ ಇನ್ನೂರು ಸಿಗುತ್ತಿತ್ತು. ಮುಂಬಯಿಯಲ್ಲಿ ದಿನಕ್ಕೆ ಸಾವಿರ ರೂಪಾಯಿ ವೇತನದ ಕೆಲಸ ಕೊಡಿಸುತ್ತೇನೆಂದು ಯಾರೋ ಕರೆದುಕೊಂಡು ಬಂದು ಇಲ್ಲಿ ಘರ್ವಾಲಿಯೊಬ್ಬಳ ಹತ್ತಿರ ಬಿಟ್ಟು ಹೋಗಿದ್ದರು. ನಂತರ ತಿಳಿಯಿತು, ಆತ ನನ್ನನ್ನು ಐವತ್ತು ಸಾವಿರಕ್ಕೆ ಮಾರಿ ಹೋಗಿರುವ ವಿಷಯ. ಐವತ್ತು ಸಾವಿರ ತೀರಿಸಲು ಘರ್ವಾಲಿಯ ಅಧೀನದಲ್ಲಿ ಎರಡು ವರ್ಷ ಮೈ ನೋಯಿಸಿಕೊಂಡಿದ್ದೆ. ಟಿಪ್ಸ್ ದುಡ್ಡನ್ನೂ ಆ ರಾಕ್ಷಸಿ ಕಿತ್ತುಕೊಳ್ಳುತ್ತಿದ್ದಳು. ಥೂ ನನ್ನ ಬದುಕಿಗೊಂದಿಷ್ಟು...’

‘ನನ್ನದು ಹಿಮಾಚಲ ಪ್ರದೇಶದ ಒಂದು ಹಳ್ಳಿ. ಎಂಥಾ ಪ್ರಕೃತಿ. ಬದುಕಿಗೆ ಟೂರಿಸಂ ಬಿಟ್ಟರೆ ನಮಗಲ್ಲಿ ಬೇರೇನೂ ದಾರಿಗಳಿರಲಿಲ್ಲ. ಹಸಿದ ಹೊಟ್ಟೆಗಳನ್ನು ಬರೀ ಪ್ರಕೃತಿ ತಣಿಸುವುದಿಲ್ಲವಲ್ಲ. ಅಪ್ಪನಿಗೆ ನಾಲ್ಕು ಜನ ಹೆಣ್ಣು ಮಕ್ಕಳಲ್ಲಿ ನಾನೇ ಹಿರಿಯವಳು. ಅಪ್ಪ ಅಡ್ವರ್ಟೈಸ್‌ಮೆಂಟ್ ಕಂಪನಿಯೊಂದರಲ್ಲಿ ಡ್ರೈವರ್ ಆಗಿದ್ದ. ಮುಂಬಯಿಯಿಂದ ಬಂದ ಅಡ್ವರ್ಟೈಸ್‌ಮೆಂಟ್ ಕಂಪನಿಯ ಡೈರೆಕ್ಟರ್ ಒಬ್ಬ ಅಪ್ಪನನ್ನು ಕುಟುಂಬ ಸಮೇತ ಮುಂಬಯಿಗೆ ಕರೆದಿದ್ದ. ಅಷ್ಟೇ, ನಾನೂ ನನ್ನ ತಂಗಿ ಇಬ್ಬರೂ ಆ ಡೈರೆಕ್ಟರನಿಗೆ ಬಲಿಪಶುಗಳಾದೆವು. ನಂತರ ಆತ ನಮ್ಮನ್ನು ಮತ್ಯಾರಿಗೋ ತಲೆಹಿಡಿದ. ನಾವು ನಾಲ್ಕು ಮಂದಿ ಸಹೋದರಿಯರೂ ಇಲ್ಲೇ ಇದ್ದೇವೆ. ಈ ಮುಂಬಯಿಯಲ್ಲಿ ಮುಖವಾಡ ಹೊತ್ತ ಲಕ್ಷಾಂತರ ಮಂದಿ ತಲೆಹಿಡುಕರಿದ್ದಾರೆ. ಆದರೆ ಮುಂಬಯಿಗೆ ಸಾವಿರ ಸಾವಿರ ಸಲಾಮು. ನಂಬಿದವರಿಗೆ, ನಂಬದವರಿಗೆ ಎಲ್ಲರಿಗೂ ಅನ್ನ ಕೊಡುತ್ತದೆ...’

‘ಹೇಯ್ ಹುಡುಗ, ನೋಡು ನನ್ನ ಪರ್ಸನಾಲಿಟಿಯನ್ನು. ನಲವತ್ತೈದು ವರ್ಷವಾದರೂ ಎಷ್ಟು ಚೆನ್ನಾಗಿ ಮೇಂಟೇನ್ ಮಾಡಿದ್ದೀನಿ. ಇಲ್ಲಿ ನನ್ನನ್ನು ಒಳ್ಳೆಯ ಮಾಲು ಎಂದೇ ಕರೆಯುತ್ತಾರೆ. ಮಾಲು ಚೆನ್ನಾಗಿದ್ದರೆ ಒಳ್ಳೆಯ ಬೆಲೆಗೆ ಬಿಕರಿಯಾಗುತ್ತದೆ. ಈ ಕಾಮಾಟಿಪುರದ ಹೆಂಗಸರೆಲ್ಲಾ ಬೀದಿ ಬದಿಯ ಮಾಲುಗಳೇ ಸರಿ. ನನ್ನನ್ನು ಹುಡುಕಿ ಬಂದ ಗಿರಾಕಿಗಳಿಗೆ ನಾನೆಂದೂ ನಿರಾಸೆ ಮಾಡುವುದಿಲ್ಲ. ಭರ್ತಿ ಸುಖ ಕೊಟ್ಟೇ ಕಳಿಸ್ತೀನಿ. ಬೇಕಾದರೆ ಒಮ್ಮೆ ಬಾ. ಕೇವಲ ಐನೂರು ರೂಪಾಯಿ. ಇವತ್ತು ಐನೂರು ರೂಪಾಯಿಗೆ